

بسم اللہِ الرّحمٰن الرّحیم

# ತಖ್ವ ಗಳಿಸಲು ಪರಿಶ್ರಮಿಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21-04-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ರಮಝಾನ್ ದಾಟಿ ಹೋಯಿತು. ರಮಝಾನಿನಲ್ಲಿ ಆರಾಧನೆ ಮಾಡಲು ಮತ್ತು ತಮ್ಮೊಳಗೆ ಪರಿಶುದ್ಧ ಬದಲಾವಣೆ ಮಾಡಲಿಕ್ಕಾಗಿ ಯೋಜನೆಗಳನ್ನು ಮಾಡಿದ, ಆದರೆ ಯೋಚಿಸಿದಂತೆ ಅವುಗಳ ಪ್ರಕಾರ ನಡೆಯಲು ಸಾಧ್ಯವಾಗದ ಅನೇಕ ಜನರು ಇರಬಹುದು. ಅನೇಕ ಜನರು ಹೀಗೆ ಹೇಳಿಕೊಂಡು ನನಗೆ ಪತ್ರ ಬರೆದಿರುವರು.

ದುಆ ಮಾಡಿದರೆ ಸ್ವೀಕಾರಗೊಳ್ಳುವ ವಿಶೇಷ ಘಳಿಗೆ ಜುಮಾದ ಅನುಗ್ರಹೀತ ದಿನದಂದು ಬರುತ್ತದೆ. ಒಟ್ಟಿನಲ್ಲಿ ನಮ್ಮ ಬಯಕೆ ಪ್ರಕಾರ ಅಥವಾ ಒಬ್ಬ ಸತ್ಯವಿಶ್ವಾಸಿ ರಮಝಾನನ್ನು ಕಳೆಯಲು ಬಯಸುವ ರೀತಿಯಲ್ಲಿ ನಮ್ಮ ರಮಝಾನಿನ ದಿನಗಳು ಕಳೆದಿಲ್ಲವೆಂದಾದರೂ ಅಲ್ಲಾಹನು ನಮ್ಮ ದೌರ್ಬಲ್ಯಗಳನ್ನು ಕಡೆಗಣಿಸುತ್ತಾ ನಮ್ಮ ಮೇಲೆ ಕೃಪೆದೋರುತ್ತಾ ನಮ್ಮ ಜೀವಿತಗಳನ್ನು ಸ್ಥಾಯಿಯಾಗಿ ಅಲ್ಲಾಹನು ಇಚ್ಛಿಸುವ ರೀತಿಯಲ್ಲಿ ಸಾಗಿಸಲು ನಮಗೆ ಸೌಭಾಗ್ಯ ನೀಡಲಿ ಎಂದು ನಾವು ಇಂದು ಪ್ರತಿಜ್ಞೆ ಮಾಡಬೇಕು ಮತ್ತು ದುಆ ಮಾಡಬೇಕು. ಅಲ್ಲಾಹನಂತು ಬಹಳ ದಯಾವಂತನಾಗಿರುವನು. ರಮಝಾನಿನ ತಿಂಗಳಲ್ಲಿ ಜುಮಾದ ದಿನದಂದು ಒಂದು ವಿಶಿಷ್ಟವಾದ ಘಳಿಗೆಯಲ್ಲಿ ಮಾತ್ರವೇ ದುಆ ಸ್ವೀಕಾರವಾಗುತ್ತದೆ ಇತರ ಸಮಯದಲ್ಲಿ ಇಲ್ಲ ಎಂದು ಅಲ್ಲಾಹನು ಹೇಳಿಲ್ಲ. ಬದಲಾಗಿ ದುಆ ಸ್ವೀಕಾರ ಪೂರ್ತಿ ಜುಮಾ ದಿನದ ವಿಶೇಷತೆಯಾಗಿದೆ ಎಂದು ಹೇಳಿರುವನು.

ಒಟ್ಟಿನಲ್ಲಿ, ನಾವು ಈ ರಮಝಾನಿನ ನಂತರವೂ ನಮ್ಮ ತಖ್ವದ ಮಟ್ಟವನ್ನು ವರ್ಧಿಸುತ್ತಾ ಹೋಗುವೆವು ಮತ್ತು ಅದಕ್ಕಾಗಿ ಪ್ರಯತ್ನವನ್ನು ಮಾಡುವೆವು ಮತ್ತು ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಪ್ರಯತ್ನ ಮಾಡುತ್ತಾ ಇರುವೆವು ಎಂದು ಇಂದು ನಾವು ನಮ್ಮ ದುಆದಲ್ಲಿ ಪ್ರತಿಜ್ಞೆ ಮಾಡಬೇಕು. ಮುಂದಿನ ಜುಮಾದ ತನಕ ನಮ್ಮ ಆರಾಧನೆಗಳನ್ನು ಅಲ್ಲಾಹನಿಗೆ ಮಾತ್ರ ಮಾಡುವೆವು ಮತ್ತು ಪ್ರತಿ ಜುಮಾದ ಎಡೆಯಲ್ಲಿ ಇರುವ ಕಾಲವನ್ನು ನಮ್ಮ ಆರಾಧನೆ ಮತ್ತು ಸತ್ಕರ್ಮಗಳಿಂದ ಅಲಂಕರಿಸುವೆವು, ದೀನಿಗೆ ಲೌಕಿಕತೆಯ ಮೇಲೆ ಆದ್ಯತೆ ನೀಡುವೆವು, ನಮ್ಮೊಳಗೆ ಪರಿಶುದ್ಧ ಬದಲಾವಣೆ ಮಾಡುವೆವು ಎಂದೂ ರಮಝಾನಿನ ತಿಂಗಳಲ್ಲಿ ಮಾಡಿದ ಆದರೆ ಯಾವುದೋ ಕಾರಣದಿಂದ ಅದರ ಪ್ರಕಾರ ನಡೆಯಲು ಸಾಧ್ಯವಾಗದ ಯೋಜನೆಯನ್ನು ಈಡೇರಿಸಲು ಮುಂದಿನ ರಮಝಾನಿನ ತನಕ ಪ್ರಯತ್ನ ಮಾಡುತ್ತಿರುವೆವು ಎಂದೂ ಪ್ರತಿಜ್ಞೆ ಮಾಡಬೇಕು. ನೈಜವಾದ ತಖ್ವವನ್ನು ಉಂಟುಮಾಡಿಸುವ ಕೃತ್ಯ ಇದೇ ಆಗಿದೆ. ನಾವು ನಿಷ್ಠಾವಂತರಾಗಿ ನಮ್ಮ ಆರಾಧನೆಗಳನ್ನು ಮತ್ತು ಕೃತ್ಯಗಳನ್ನು ಅಲ್ಲಾಹನ ಸಂಪ್ರೀತಿಗಾಗಿ ಮಾಡಿದರೆ ರಮಝಾನಿನಲ್ಲಿ ಸ್ವಲ್ಪ ಮಟ್ಟಿಗೆ ಸತ್ಕರ್ಮಗಳನ್ನು ಮಾಡುತ್ತಾ ಗಳಿಸಲು ಪ್ರಯತ್ನಿಸಿದ ಅನುಗ್ರಹಗಳನ್ನು ಅತ್ಯಂತ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನು ದಯಪಾಲಿಸುತ್ತಾ ಇರುವನು.

ಒಟ್ಟಿನಲ್ಲಿ ಯಥಾರ್ಥವಾದ ಸಂಗತಿ ತಖ್ವಾ ಆಗಿದೆ. ಯಥಾರ್ಥವಾದ ಸಂಗತಿ ಸ್ಥಿರಚಿತ್ತತೆಯಿಂದ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದಾಗಿದೆ. ನಿಜವಾದ ಸಂಗತಿ ದೇವಭಯ ಮತ್ತು ಅವನ ಸಂಪ್ರೀತಿಯನ್ನು ಗಳಿಸುವುದಾಗಿದೆ. ಇವುಗಳಿದ್ದರೆ ಮತ್ತು ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆಯನ್ನು ನೀಡುವುದನ್ನು ಮರೆತು ಬಿಡುವಂತಹ ಈ ಲೌಕಿಕವಾದ ಜೀವಿತದ ಕಡೆಗೆ ಮರಳಿ ಹೋಗುವುದಿಲ್ಲವೆಂದಾದರೆ, ರಮಝಾನಿನಲ್ಲಿ ನಾವು ಹೇಗಾದರೂ ಮಾಡಿದ ಆರಾಧನೆಗಳು ಮತ್ತು ಸುಧಾರಣೆಯ ಪ್ರಯತ್ನಗಳನ್ನು ಅಲ್ಲಾಹನು ಸ್ವೀಕಾರ ಮಾಡುತ್ತಾ ನಮ್ಮನ್ನು ಅನುಗ್ರಹಿಸುವನು.

ಈ ಮುಖ್ಯ ಅಂಶವನ್ನು ನಾವು ಸದಾ ಮುಂದಿರಿಸಬೇಕು. ಈ ಉದ್ದೇಶ ಗಳಿಕೆಯನ್ನು ಪ್ರತಿಯೊಬ್ಬ ಅಹ್ಮದೀ ಸದಾ ತನ್ನ ಮುಂದೆ ಇರಿಸಬೇಕು. ನಾವು ಸ್ವತಃ ನಮ್ಮ ಜೀವಿತಗಳನ್ನು ತಖ್ವದಲ್ಲಿ ನಡೆಸಲು ಹಾಗೂ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸಾಗಿಸುವಾಗ ನಾವು ನಮ್ಮ ಮಕ್ಕಳ ಮತ್ತು ನಮ್ಮ ಸಂತಾನಗಳ ಮುಂದೆಯೂ ಆ ಮಾದರಿಗಳನ್ನು ಇರಿಸುವವರಾಗುವೆವು. ಇದರಿಂದ ಒಳಿತುಗಳನ್ನು ಮಾಡುವ ಜಾಗೃತಿಯು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹರಡುತ್ತಾ ಹೋಗುವುದು.

ಹಝ್ರತ್ ಮಸೀಹ್ ಮೌಊದ್[ಅ] ಬಹಳ ಒತ್ತು ನೀಡಿದ ಉದ್ದೇಶ ತಖ್ವಾ ಗಳಿಸುವುದೇ ಆಗಿದೆ. ನಮ್ಮ ತಖ್ವಾದ ಮಟ್ಟವನ್ನು ಉನ್ನತಗೊಳಿಸಲಿಕ್ಕಾಗಿಯೇ ಹಝ್ರತ್ ಮಸೀಹ್ ಮೌಊದ್[ಅ]ರನ್ನು ಕಳುಹಿಸಲಾಗಿತ್ತು. ಒಂದು ಸಂದರ್ಭದಲ್ಲಿ ಅವರು ಹೇಳಿದರು: ಸತ್ಯ ಮತ್ತು ಸತ್ಯವಿಶ್ವಾಸದ ಕಾಲ ಪುನಃ ಆಗಮಿಸಲಿಕ್ಕಾಗಿ ಮತ್ತು ಹೃದಯಗಳಲ್ಲಿ ದೇವಭಕ್ತಿ ಉಂಟಾಗಲಿಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಆದ್ದರಿಂದ ಈ ಕೆಲಸಗಳೇ ನನ್ನ ಅಸ್ತಿತ್ವದ ಪರಮ ಉದ್ದೇಶವಾಗಿದೆ. ಆದ್ದರಿಂದ ಅವರ ಕಾಲಘಟ್ಟ ನುಬುವ್ವತ್ ಮಾರ್ಗದ ಖಿಲಾಫತಿನಲ್ಲಿ ನೆಲೆಗೊಳ್ಳುತ್ತಾ ಹಝ್ರತ್ ಪೈಗಂಬರ್[ಸ]ರ ಭವಿಷ್ಯವಾಣಿಗಳ ಪ್ರಕಾರ ಅಂತಿಮ ಕಾಲದ ವರೆಗೆ ಮುಂದುವರೆಯಲಿರುವ ಕಾಲಘಟ್ಟವಾಗಿದೆ. ಇದರಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರನ್ನು ನಂಬುವವರೇ ಸತ್ಯದಲ್ಲಿ ನೆಲೆನಿಲ್ಲುತ್ತಾ ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಬೇಕಾಗಿದೆ. ಈ ಉದ್ದೇಶವು ಒಂದು ತಿಂಗಳ ಆರಾಧನೆಗಳಿಂದ ಅಥವಾ

ಒಳಿತುಗಳ ಪ್ರಯತ್ನಗಳಿಂದ ಗಳಿಸಲಾಗದು. ನಾವು ನಮ್ಮ ಆರಾಧನೆಗಳಲ್ಲಿ ಸ್ಥಾಯಿಯಾಗುತ್ತಾ ನೆಲೆನಿಂತರೆ, ಅಂಥವರ ಕುರಿತು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ 'ನಾನು ನಿನ್ನೊಂದಿಗೆ ಮತ್ತು ನಿನ್ನ ಪ್ರಿಯರೊಂದಿಗೆ ಇರುವೆನು' ಎಂದು ಹೇಳಿರುವನು. ಆದ್ದರಿಂದ ನಾವು ಈ ರೀತಿಯಾಗಿ ನಮ್ಮ ಜೀವಿತಗಳನ್ನು ಸಾಗಿಸುವುದಾದರೆ ನಾವು ನಮ್ಮ ಕೃತ್ಯಗಳಿಂದ ಲೋಕಕ್ಕೆ ಈ ಸಂದೇಶವನ್ನು ನೀಡುವವರಾಗುವೆವು: 'ನೀವು ಅಲ್ಲಾಹನ ಜೊತೆಗೆ ಜೀವಂತವಾದ ಸಂಬಂಧವನ್ನು ಉಂಟುಮಾಡಲು ಬಯಸುವರಾದರೆ ಬನ್ನಿರಿ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸನನ್ನು ಸ್ವೀಕಾರ ಮಾಡಿರಿ'

ಯಥಾರ್ಥವಾದ ತಖ್ವಾ ಏನು ಮತ್ತು ಅದರ ಪ್ರಕಾರ ನಡೆಯುವವನು ಹೇಗಿರುತ್ತಾನೆ ಮತ್ತು ಆತನೊಂದಿಗೆ ಅಲ್ಲಾಹನು ಹೇಗೆ ವರ್ತಿಸುತ್ತಾನೆ ಎಂಬುವುದಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೈಜವಾದ ತಖ್ವದ ಜೊತೆಗೆ ಅಜ್ಞಾನ ಬಂದು ಸೇರುವುದಿಲ್ಲ. ನೈಜವಾದ ತಖ್ವಾ ತನ್ನೊಂದಿಗೆ ಒಂದು ಪ್ರಕಾಶವನ್ನು ಇರಿಸುತ್ತದೆ. ಅಲ್ಲಾಹನು ಅದರ ಕುರಿತು ಹೇಳುತ್ತಾನೆ: ಎಲೈ ಸತ್ಯವಿಶ್ವಾಸಿಗಳೇ, ದೇವಭಕ್ತಿ ತೋರಿಸುವುದರಲ್ಲಿ ಸ್ಥಿರಚಿತ್ತರಾಗಿ ಇದ್ದರೆ ಮತ್ತು ಅಲ್ಲಾಹನಿಗಾಗಿ ದೇವಭಕ್ತಿಯಲ್ಲಿ ಸ್ಥಾಯಿಯಾಗಿ ಇರುವುದಾದರೆ ಹಾಗೂ ಸುದೃಢವಾಗಿ ಇರುವ ಗುಣವನ್ನು ಅಳವಡಿಸಿಕೊಂಡರೆ ಅಲ್ಲಾಹನು ನಿಮ್ಮಲ್ಲಿ ಮತ್ತು ಅನ್ಯರಲ್ಲಿ ಒಂದು ವ್ಯತ್ಯಾಸವನ್ನು ಇರಿಸುವನು. ಆ ವ್ಯತ್ಯಾಸವೇನೆಂದರೆ, ನಿಮಗೆ ಒಂದು ಪ್ರಕಾಶವನ್ನು ನೀಡಲಾಗುವುದು. ಆ ಪ್ರಕಾಶ ನಿಮ್ಮ ಕೃತ್ಯಗಳು, ಮಾತುಗಳು, ಸಾಮರ್ಥ್ಯಗಳು ಮತ್ತು ಇಂದ್ರಿಯಗಳಲ್ಲಿ ಉಂಟಾಗುವುದು. ನಿಮ್ಮ ಬುದ್ಧಿಯಲ್ಲೂ ಪ್ರಕಾಶವಿರುವುದು ಮತ್ತು ನಿಮ್ಮ ಬರೀ ಮಾತಿನಲ್ಲೂ ಪ್ರಕಾಶವಿರುವುದು. ನಿಮ್ಮ ಕಣ್ಣುಗಳಲ್ಲೂ ಪ್ರಕಾಶವಿರುವುದು, ನಿಮ್ಮ ಕಿವಿಗಳಲ್ಲೂ, ನಿಮ್ಮ ನಾಲಗೆಗಳಲ್ಲೂ, ನಿಮ್ಮ ಹೇಳಿಕೆಗಳಲ್ಲೂ, ನಿಮ್ಮ ಪ್ರತಿ ಚಲನವಲನದಲ್ಲೂ ಪ್ರಕಾಶವಿರುವುದು. ಈ ಪದವಿಯನ್ನು ಪ್ರತಿಯೊಬ್ಬ ಮೂಅ್‌ಮಿನ್ ಮತ್ತು ಮುತ್ತಖಿ ಗಳಿಸಲು ಪ್ರಯತ್ನಿಸಬೇಕಾಗಿದೆ. ರಮಝ್ಹಾನ್ ದಾಟಿಹೋದರೂ ನಾವು ಈ ಪದವಿಯನ್ನು ಗಳಿಸಲು ಪ್ರಯತ್ನಿಸಬಹುದಾಗಿದೆ. ನಮ್ಮಲ್ಲಿ ಈ ಪದವಿಯನ್ನು ಗಳಿಸುವವರು ಸೌಭಾಗ್ಯಶಾಲಿಗಳು.

ಈ ಕಾಲಘಟ್ಟ ವಿಶೇಷವಾಗಿ ಶೈತಾನನ ದಾಳಿಗಳ ಕಾಲವಾಗಿದೆ ಎಂದು ನೆನಪಿಡಬೇಕಾಗಿದೆ. ಅವನು ತನ್ನ ಎಲ್ಲ ಕುಯುಕ್ತಿಗಳು, ಕುತಂತ್ರಗಳು ಮತ್ತು ಆಯುಧಗಳಿಂದ ದಾಳಿ ಮಾಡುತ್ತಿದ್ದಾನೆ. ಇಂತಹ ಸ್ಥಿತಿಯಲ್ಲಿ ನಾವು ಅಲ್ಲಾಹನ ಕಡೆಗೆ ಮೊದಲಿಗಿಂತ ಹೆಚ್ಚು ಬಾಗುವ ಆವಶ್ಯಕತಯಿದೆ. ಟಿ.ವಿ.ಯಲ್ಲೂ, ಸೋಶಿಯಲ್ ಮೀಡಿಯಾದಲ್ಲೂ, ಇತರ ಕಾರ್ಯಕ್ರಮಗಳಲ್ಲೂ, ಮಕ್ಕಳ ಸ್ಕೂಲ್ ಮತ್ತು ಅವರ ಕಾರ್ಯಕ್ರಮಗಳಲ್ಲೂ ಪ್ರತಿಯೊಂದೆಡೆ ಶೈತಾನನು ದಜ್ಜಾಲಿನ ಮೂಲಕ ಎಂತಹ ಬಲೆಯನ್ನು ಕಟ್ಟಿದ್ದಾನೆ ಎಂದರೆ, ಅದರಿಂದ ಅಲ್ಲಾಹನ ಕೃಪೆಯಿಲ್ಲದೇ ರಕ್ಷಣೆ ಪಡೆಯುವುದು ಅಸಾಧ್ಯ. ಈಗ ಅತ್ಯಂತ ಹೆಚ್ಚು ಚಿಂತೆ ನಮ್ಮ ಮಕ್ಕಳನ್ನು ಶೈತಾನನ ದಾಳಿಯಿಂದ ರಕ್ಷಿಸುವುದರ ಕುರಿತಾಗಿದೆ. ಇದಕ್ಕಾಗಿ ಹೆತ್ತವರು ಮತ್ತು ಜಮಾಅತಿನ ವ್ಯವಸ್ಥೆ ಪ್ರಯತ್ನ ಸಹ ಮಾಡಬೇಕು. ಈ ಉದ್ದೇಶಕ್ಕಾಗಿ ಪ್ರತಿಯೊಬ್ಬ ಬುದ್ಧಿವಂತ ಮತ್ತು ಪ್ರೌಢ ಅಹ್ಮದಿಯು ತಖ್ವಾದ ಉನ್ನತ ಮಟ್ಟವನ್ನು ಗಳಿಸಬೇಕಾಗಿದೆ. ಆಗಲೇ ನಾವು ನಮ್ಮ ಸಂತಾನಗಳನ್ನು ಶೈತಾನನ ದಾಳಿಗಳಿಂದ ರಕ್ಷಿಸಲು ಸಾಧ್ಯ. ರಮಝ್ಹಾನಿನ ನಂತರ ನಾವು ಆರಾಮವಾಗಿ ಕುಳಿತುಕೊಳ್ಳಬಾರದು. ಬದಲಾಗಿ ಪವಿತ್ರ ಖುರ್‌ಆನಿನ ಮತ್ತು ಧರ್ಮದ ಬಗ್ಗೆ ಇರುವ ನಮ್ಮ ಅರಿವನ್ನು ವರ್ಧಿಸಲು ಪ್ರಯತ್ನಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಖಿಯಾಮತ್ ದಿನದ ತನಕ ನನ್ನನ್ನು ಅನುಸರಿಸುವವರಿಗೆ ನನ್ನ ವಿರೋಧಿಗಳ ಮೇಲೆ ವಿಜಯ ನೀಡುವನು ಎಂಬುದು ಸತ್ಯ ಸಂಗತಿಯಾಗಿದೆ. ಆದರೆ ಯೋಚಿಸಬೇಕಾದ ಸಂಗತಿಯೇನೆಂದರೆ, ಎಲ್ಲಿಯ ವರೆಗೆ ಒಬ್ಬನು ತನ್ನೊಳಗೆ ಅನುಸರಣೆಯ ಪೂರ್ಣ ಅವಸ್ಥೆಯನ್ನು ಉಂಟು ಮಾಡುವುದಿಲ್ಲವೋ ಅಲ್ಲಿಯ ವರೆಗೆ ನನ್ನ ಕೈಯಲ್ಲಿ ಬೈಅತ್ ಮಾಡುವುದರಿಂದ ಒಬ್ಬ ವ್ಯಕ್ತಿ ನನ್ನನ್ನು ಅನುಸರಿಸುವವರಲ್ಲಿ ಸೇರುವುದಿಲ್ಲ. ತಿಳಿದುಕೊಳ್ಳಿರಿ, ಎಲ್ಲಿಯ ವರೆಗೆ ಹೃದಯದ ದೃಢಸಂಕಲ್ಪ ಮತ್ತು ದುಆದೊಂದಿಗೆ ನಡೆಯುವುದಿಲ್ಲವೋ ಅಲ್ಲಿಯ ವರೆಗೆ ಕೇವಲ ಬಾಯಿಮಾತಿನ ಬೈಅತ್ತಿನ ಒಪ್ಪಿಗೆ ಮಾಡುವುದರಿಂದ ಯಾವುದೇ ಅರ್ಥವಿಲ್ಲ. ಒಟ್ಟಿನಲ್ಲಿ ಯಾವ ವ್ಯಕ್ತಿ ನನ್ನ ಅಧ್ಯಾಪನೆ ಪ್ರಕಾರ ಪೂರ್ಣವಾಗಿ ನಡೆಯುತ್ತಾನೋ ಆತನು ಈ ನನ್ನ ಮನೆಯಲ್ಲಿ ಪ್ರವೇಶಿಸುತ್ತಾನೆ. ಅದರ ಕುರಿತು ಅಲ್ಲಾಹನ ವಚನದಲ್ಲಿ **'ಇನ್ನೀ ಉಹಾಫಿಝು ಕುಲ್ಲ ಮನ್ ಫಿದ್ದಾರ್'** ಎಂಬ ವಾಗ್ದಾನವಿದೆ. ಎಂದರೆ, ನಿನ್ನ ನಾಲ್ಕು ಗೋಡೆಗಳ ಕಟ್ಟಡದ ಒಳಗೆ ಇರುವ ಪ್ರತಿಯೊಬ್ಬನನ್ನು ನಾನು ರಕ್ಷಿಸುವೆನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **ಲಾ ಹೌಲ** ಎಂದು ಹೇಳುವಾಗ ಶೈತಾನನು ಓಡಿಹೋಗುತ್ತಾನೆ ಎಂದು ನಿಮಗೆ ಗೊತ್ತೇ ಇದೆ. ಆದರೆ ಶೈತಾನನು ಕೇವಲ ಬಾಯಿ ಮಾತಿನ **ಲಾ ಹೌಲ** ಎಂಬ ದುಆದಿಂದ ಓಡಿ ಹೋಗುವಂತಹ ಮುಗ್ಧನಲ್ಲ. ಸತ್ಯ ಸಂಗತಿ ಏನೆಂದರೆ, ಯಾರ ಕಣಕಣದಲ್ಲಿ **ಲಾ ಹೌಲ** ನುಗ್ಗಿ ಹೋಗುತ್ತದೋ ಮತ್ತು ಯಾರು ಸದಾ ಅಲ್ಲಾಹನಿಂದಲೇ ಸಹಾಯ ಮತ್ತು ನೆರವನ್ನು ಬೇಡುತ್ತಿರುತ್ತಾರೋ, ಯಾರು ಅವನಿಂದಲೇ ಪ್ರಯೋಜನವನ್ನು ಗಳಿಸುತ್ತಿರುತ್ತಾರೋ ಅಂಥವರು ಶೈತಾನನಿಂದ ರಕ್ಷಿಸಲ್ಪಡುತ್ತಾರೆ.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: ದುಆದಲ್ಲಿ ಕಾಂತೀಯ ಪ್ರಭಾವ ಇರುತ್ತದೆ. ಅದು ಸಮೃದ್ಧಿ ಮತ್ತು ಅನುಗ್ರಹವನ್ನು ತನ್ನ ಕಡೆಗೆ ಸೆಳೆಯುತ್ತದೆ. ಎಲ್ಲಿಯ ವರೆಗೆ ಮನುಷ್ಯನು ಅಲ್ಲಾಹನ ಗ್ರಂಥಕ್ಕೆ ಆದ್ಯತೆ ನೀಡುವುದಿಲ್ಲವೋ ಮತ್ತು ಅದರ ಪ್ರಕಾರ ನಡೆಯುವುದಿಲ್ಲವೋ ಅಲ್ಲಿಯ ವರೆಗೆ ಆತನ ನಮಾಝ್ ಕೇವಲ ಸಮಯವನ್ನು ವ್ಯರ್ಥಗೊಳಿಸುವಂಥದ್ದಾಗಿದೆ.

(ಹುಝೂರ್ ಹೇಳಿದರು:) ನಮಾಝ್ ಆರಾಧನೆಯ ತಿರುಳಾಗಿದೆ ಎಂದು ಒಂದು ಹದೀಸಿನಲ್ಲಿ ಬಂದಿದೆ. ಆದ್ದರಿಂದ ನಾವು ಈ ತಿರುಳನ್ನು ಗಳಿಸಲು ಪ್ರಯತ್ನಿಸುವಾಗ ನಮಾಝಿನ

ಮತ್ತು ಆರಾಧನೆಯ ಹಕ್ಕನ್ನು ಈಡೇರಿಸುವವರಾಗುವೆವು ಮತ್ತು ಅಲ್ಲಾಹನ ಸಾಮೀಪ್ಯವನ್ನು ಗಳಿಸುವವರಾಗುವೆವು. ಇಲ್ಲದಿದ್ದರೆ, ಬಾಹ್ಯವಾದ ನಮಾಝಿನಿಂದ ಯಾವುದೇ ಪ್ರಯೋಜನವಿಲ್ಲ. ಮಸೀದಿಗಳಿಗೆ ಹೋಗಿ ನಮಾಝ್‌ಗಳನ್ನು ನಿರ್ವಹಿಸಿಕೊಂಡು ಅನಂತರ ದೌರ್ಜನ್ಯ ಮತ್ತು ಕ್ರೂರತೆಯಲ್ಲಿ ಮಿತಿಮೀರುವ ಅನೇಕ ನಮಾಝಿಗಳು ಇರುವರು.

ನಮ್ಮ ನಮಾಝ್‌ಗಳು ಹೇಗೆ ಇರಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೆನಪಿಡಿರಿ, ನಮಾಝ್ ಎಂತಹ ಸಂಗತಿಯೆಂದರೆ, ಅದರಿಂದ ಸಕಲ ಕಷ್ಟತೆಗಳು ಸುಲಭವಾಗುತ್ತವೆ. ಎಲ್ಲ ವಿಪತ್ತುಗಳು ದೂರವಾಗುತ್ತವೆ. ಆದರೆ ನಮಾಝ್ ಎಂಬುದರ ಉದ್ದೇಶ ಸಾಮಾನ್ಯ ಜನರು ಸಂಪ್ರದಾಯದಂತೆ ನಿರ್ವಹಿಸುವ ನಮಾಝ್ ಅಲ್ಲ. ಬದಲಾಗಿ ಮನುಷ್ಯನ ಹೃದಯ ಮೃದುಗೊಳ್ಳುವಂತಹ ಮತ್ತು ಏಕದೇವನ ಸನ್ನಿಧಿಯಲ್ಲಿ ಬಿದ್ದುಕೊಂಡು ಲೀನವಾಗಿ ಕರಗಿ ಹೋಗುವಂತಹ ನಮಾಝನ್ನು ಉದ್ದೇಶಿಸಲಾಗಿದೆ.

ಅಲ್ಲಾಹನು ನಮಗೆ ನಮಾಝ್‌ಗಳ ಹಕ್ಕನ್ನು ಈಡೇರಿಸಲು ಸೌಭಾಗ್ಯ ನೀಡಲಿ. ರಕ್ಷಣೆಯ ಖಾತರಿ ನೀಡುವಂತಹ ಆರಾಧನೆಗಳ ಅಭ್ಯಾಸವನ್ನು ನಾವು ನಮ್ಮ ಸಂತಾನಗಳಿಗೆ ಮತ್ತು ಮುಂದಿನ ಪೀಳಿಗೆಗೆ ನೀಡುವಂತಾಗಲಿ. ದಜ್ಜಾಲ್ ಈ ಕಾಲಘಟ್ಟದಲ್ಲಿ ನಾಶವಾಗುವನು. ಇದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಮಾಡಿರುವ ವಾಗ್ದಾನವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ]ರ ಜಮಾಅತಿನಲ್ಲಿ ಸೇರ್ಪಡೆಗೊಳ್ಳುವ ಹಕ್ಕನ್ನು ಈಡೇರಿಸುವವರಾದರೆ ನಾವು ಸೌಭಾಗ್ಯಶಾಲಿಗಳು. ಈ ಹಕ್ಕನ್ನು ಈಡೇರಿಸಲು ಹಝ್ರತ್ ಮಸೀಹ್ ಮೌಊದ್[ಅ] ನೀಡಿರುವ ಒಂದು ಸಲಹೆ ಅಳಲು, ವಿನಯ ಮತ್ತು ಆರಾಧನೆಯಾಗಿದೆ. ಈ ಪದವಿಯನ್ನು ಗಳಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ: ನಿಮ್ಮ ದಿನ ಮತ್ತು ರಾತ್ರಿ, ಒಟ್ಟಾರೆ ಹೇಳುವುದಾದರೆ, ಯಾವುದೇ ಘಳಿಗೆ ದುಆಗಳನ್ನು ಮಾಡದೇ ಇರುವ ಸ್ಥಿತಿ ಉಂಟಾಗಬಾರದು. ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ದುಷ್ಟರ ಮತ್ತು ಎದುರಾಳಿಗಳ ಕೆಡುಕುಗಳಿಂದ ಸುರಕ್ಷಿತಗೊಳಿಸಲಿ. ಪಾಕಿಸ್ತಾನದಲ್ಲಿ ಇರುವ ಅಹ್ಮದಿಯರು ಕೂಡ ತಮಗಾಗಿ ದುಆ ಮಾಡಿರಿ. ಮೂರು, ನಾಲ್ಕು ಅಥವಾ ವಾರದ ದುಆಗಳಲ್ಲ. ಬದಲಾಗಿ ಸ್ಥಿರವಾಗಿ ದುಆ ಮಾಡಬೇಕು. ತಮ್ಮ ಜೀವಿತಗಳನ್ನು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯಲು ಪ್ರತಿಜ್ಞೆ ಮಾಡಿರಿ. ಬುರ್ಕಿನಾಫಾಸೋ, ಬಾಂಗ್ಲಾದೇಶ, ಅಲ್‌ಜೀರಿಯ ಮತ್ತು ಲೋಕದ ಪ್ರತಿಯೊಂದು ದೇಶದ ಅಹ್ಮದಿಯರಿಗಾಗಿ ದುಆ ಮಾಡಿರಿ. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಶತ್ರುಗಳ ತೊಂದರೆಗಳಿಂದ ಸಂರಕ್ಷಿಸಲಿ. ಅಲ್ಲಾಹನು ನಮಗೆ ನಮ್ಮೊಳಗೆ ಪರಿಶುದ್ಧ ಬದಲಾವಣೆ ಉಂಟುಮಾಡಲು ಮತ್ತು ದುಆಗಳನ್ನು ಮಾಡಲು ಸೌಭಾಗ್ಯ ನೀಡಲಿ. ಆ ದುಆಗಳನ್ನು ಅಲ್ಲಾಹನು ಸ್ವೀಕಾರ ಮಾಡಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis***(atba)

*At, **'Masjid Mubarak'**, Islamabad, Tilford, UK. On 21-04-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon